# ಪೀಠಿಕೆ

ಹೆಚ್ಚಾದ ಬೈಬಲ್ ವಿದ್ಯಾರ್ಥಿಗಳು ಒಂದಲ್ಲಾ ಒಂದು ಸಮಯದಲ್ಲಿ "ಬೈಬಲು ಸರಿಯಾದದ್ದೂ ಮತ್ತು ತಪ್ಪಿಲ್ಲದ್ದೂ ಆಗಿದೆಯೋ?" ಎಂಬ ದೊಡ್ಡ ಪ್ರಶ್ನೆಯನ್ನು ವಿಚಾರಿಸುತ್ತಾರೆ. ಇತರರು ಕೇಳಬಹುದಾದ ಪ್ರಶ್ನೆಗಳನ್ನು ಈ ರೀತಿಯಲ್ಲಿ ಸಂಕ್ಷೇಪಿಸಿ ಹೇಳಬಹುದು: "ಬೈಬಲು, ಯೇಸು ಮತ್ತು ಸಭೆಯನ್ನು ಕುರಿತು ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಮಾಹಿತಿಯನ್ನು, ಕ್ರಿಸ್ತನ ಬೋಧನೆಯಲ್ಲಿ ನೇರವಾದ ಮಾರ್ಗದರ್ಶನವನ್ನು ಹಾಗೂ ಅಗತ್ಯವಾದ ನೀತಿ ಶಾಸ್ತ್ರದ ಮತ್ತು ನೈತಿಕ ಮಟ್ಟವನ್ನು ಕೊಡುವದೆಂದು ನಾವು ನಂಬಿಕೆ ಇಡಬಹುದೋ?"

ಬೈಬಲು ದೇವರಿಂದ ಕೊಡಲ್ಪಟ್ಟಿತು. ಅದು ಯುಗಗಳಲ್ಲಿ ಹಸ್ತಾಂತರಿಸಲ್ಪಟ್ಟು ನಂಬಿಕೆಗೆ ಯೋಗ್ಯವಾದ ಪೂರ್ವ ರೀತಿಯಲ್ಲಿ ಕಾದಿಡಲ್ಪಟ್ಟಿದೆ. ಆದುದರಿಂದ ಅದು ಸರಿಯಾಗಿ ಭಾಷಾಂತರಿಸಲ್ಪಡುವಾಗ ಮತ್ತು ಯೋಗ್ಯವಾಗಿ ವ್ಯಾಖ್ಯಾನಿಸಲ್ಪಡುವಾಗ ಅದರ ಸಂದೇಶವು ದೇವರ ಅಗತ್ಯವಾದ ನೈತಿಕ ಮಟ್ಟದ್ದಾಗಿರುತ್ತದೆ. ಹೊಸ ಒಡಂಬಡಿಕೆಯು ಕ್ರಿಸ್ತನ ಬೋಧನೆ ಮಾತ್ರವೇ ಆಗಿದೆ. ಈ ಪಾಠಗಳಲ್ಲಿ ಬೈಬಲಿನ ದೈವ ಪ್ರೇರಣೆಯನ್ನೂ ಅಧಿಕಾರವನ್ನೂ ವಿಚಾರಿಸುತ್ತೇವೆ.

## "ದೈವ ಪ್ರೇರಣೆಯ" ವಿಶಾಲವಾದ ನಿರ್ವಚನ

ಆಯ್ದುಕೊಂಡ ಜನರಲ್ಲಿ ಪರಿಶುದ್ಧಾತ್ಮನು ಕಾರ್ಯಮಾಡಿದಂತೆ ದೇವರ ಪ್ರೇರಣೆಯಿಂದ ಬೈಬಲ್ ಕೊಡಲ್ಪಟ್ಟಿತ್ತು. ದೇವರ ವಿಚಾರಗಳನ್ನು ಪರಿಶುದ್ಧಾತ್ಮನು ಅವರಿಗೆ ಪ್ರಕಟಿಸಿದನು, ಮತ್ತು ತಪ್ಪಿಲ್ಲದೇ ದೈವಿಕ ಸತ್ಯವನ್ನು ತಿಳಿಸುವದಕ್ಕೆ ಯೋಗ್ಯ ಪದಗಳನ್ನು ಉಪಯೋಗಿಸಲು ಅವರನ್ನು ಶಕ್ತರನ್ನಾಗಿ ಮಾಡಿದನು. "ದೈವಪ್ರೇರಣೆ" ಎಂಬುದು ಲ್ಯಾಟಿನ್ ಪದಗಳಿಂದ ಬಂದಿದ್ದು "ಒಳಗೆ ಊಸಿರು" (breathe in or into) (*in* and *Spiro*) ಎಂದರ್ಥವಾಗುತ್ತದೆ. ಮತ್ತು ಒಂದು ಗ್ರೀಕ್ ಪದದಿಂದ, "ದೇವರ ಆತ್ಮವುಳ್ಳ" ಇಲ್ಲವೇ "ದೇವರು ಊಸುರಿದ" ಎಂಬರ್ಥದಿಂದ (*theopneustos*) ಬಂದಿದೆ. ಬೈಬಲಿನ ಬರಹಗಾರರಲ್ಲಿ ದೇವರು ಪರಿಶುದ್ಧಾತ್ಮನನ್ನು ಇಟ್ಟನು. ಹಾಗೂ ಆತನ ಮುಖಾಂತರವಾಗಿ ಬೈಬಲನ್ನು ಬರೆಯುವಲ್ಲಿ ಅವರಿಗೆ ಮಾರ್ಗದರ್ಶನ ಮಾಡಿದನು. ಹೀಗೆ "ದೈವ ಪ್ರೇರಣೆ" ಎಂಬುದನ್ನು ತಪ್ಪು ಇಲ್ಲದೇ ದೈವಿಕ ಸತ್ಯವನ್ನು ಸ್ವೀಕರಿಸಲು ಮತ್ತು ತಿಳಿಸಲು ಜನರನ್ನು ಶಕ್ತರನ್ನಾಗಿ ಮಾಡಿ, ಅವರಲ್ಲಿ ತನ್ನ ಆತ್ಮನನ್ನು ದೇವರು ಊಸುರಿದ ಸಾಧನದಂತೆ ನಿರೂಪಿಸಬಹುದು, ಬೈಬಲು ದೇವರು ಮಾತನಾಡುವುದು ಆಗಿದೆ!

ಬೈಬಲಿನ ಬರೆಹಗಾರರು ತಾವು ತಿಳಿದ ಮತ್ತು ಪ್ರೇರೇಪಣೆ ಯಿಲ್ಲದೇ ತಿಳಿಯದೇ ಇದ್ದ ಎರಡೂ ಸಂಗತಿಗಳನ್ನು ಕುರಿತು ಬರೆದರು. ಅವರು ಬರೆದ, ತಿಳಿದ ಸಂಗತಿಗಳು ವೈಯಕ್ತಿಕ ಗಮನದಿಂದ, ಅಸ್ತಿತ್ವದಲ್ಲಿದ್ದ ದಾಖಲೆಯಿಂದ ಅಥವಾ ಬಾಯ್ದೆರೆ

ಸಂಪ್ರದಾಯದಿಂದ ಬಂದವುಗಳು. ಈ ಜನರಿಂದ ಬರೆಯಲ್ಪಟ್ಟಿದ್ದರಲ್ಲಿ ಹೆಚ್ಚಾದದ್ದು ದೇವರಿಂದ ಪ್ರಕಟಣೆಯ ಮುಖಾಂತರ ಮೊದಲ ಸಲ ಅವರ ತಿಳುವಳಿಕೆಗೆ ಬಂದಿತು. ತಿಳಿದ ಸಂಗತಿಗಳನ್ನಾಗಲೀ ಇಲ್ಲವೇ ಪ್ರಕಟನೆಯನ್ನಾಗಲೀ ಬರೆಯುತ್ತಿದ್ದಾಗ, ತಿಳಿಸುವದರಲ್ಲಿ ತಪ್ಪಿಲ್ಲದೇ ಸತ್ಯವನ್ನು ಮಾತ್ರವೇ ತಿಳಿಯಪಡಿಸುವದರಲ್ಲಿ ದೈವಪ್ರೇರಣೆಯು ಅವರನ್ನು ನಡಿಸಿತು.

## ದೈವ ಪ್ರೇರಣೆಯ ಬಗ್ಗೆ ಬೈಬಲಿನ ಹೇಳಿಕೊಳ್ಳುವಿಕೆಗಳು

ಬೈಬಲು ತನಗಾಗಿ ದೈವ ಪ್ರೇರಣೆಯ ಹಕ್ಕು ಸಾಧಿಸುತ್ತದೆ. "ಬೈಬಲು ದೈವ ಪ್ರೇರಣೆ ಹೊಂದಿದ್ದಕ್ಕಾಗಿ ಅದನ್ನು ನಂಬುತ್ತೇನೆ. ಹಾಗೂ ಬೈಬಲು ತಾನು ದೈವ ಪ್ರೇರಣೆ ಹೊಂದಿರುವದಾಗಿ ಹೇಳುವದರಿಂದ ಅದನ್ನು ನಂಬುತ್ತೇನೆ" ಎಂದು ಹೇಳುವುದು ನಿರುಪಯೋಗಿಯಾದದ್ದು. ಈ ಸುತ್ತುವರಿದ ತರ್ಕಮಾಡುವುದು ಬೈಬಲಿನ ದೈವಪ್ರೇರಣೆಗೆ ಸಾಕಷ್ಟಾದ ಪುರಾವೆಯಲ್ಲ. ಹೀಗಿದ್ದರೂ ದೈವಪ್ರೇರಣೆಗಾಗಿರುವ ಹೇಳಿಕೊಳ್ಳುವಿಕೆಗಳು ಬೈಬಲಿನ ದೈವಿಕ ಮೂಲವನ್ನು ಪ್ರತಿಪಾದಿಸುವ ವಿವರಣೆಯ ಪ್ರಮುಖ ಭಾಗಗಳಾಗಿವೆ.

### ಹಳೇ ಒಡಂಬಡಿಕೆಯ ಹೇಳಿಕೊಳ್ಳುವಿಕೆಗಳು

ದೇವರ ಸ್ಪಷ್ಟವಾದ ವಾಕ್ಯಗಳಾಗಿರುವವೆಂದು 3,800ಕ್ಕಿಂತ ಹೆಚ್ಚು ಸಲ ಹಳೇ ಒಡಂಬಡಿಕೆ ಹೇಳಿಕೊಳ್ಳುತ್ತದೆ. ಈ ದಾವೆಯು ಹಳೇ ಒಡಂಬಡಿಕೆಯ ಸಾಮಾನ್ಯ ಆವೃತ್ತಿಯಲ್ಲಿ ಪ್ರತೀ ಪುಟದಲ್ಲಿ 2½ ಯಿಂದ 3 ಸಲ ಮಾಡಲ್ಪಟ್ಟಿದೆ. ಪಂಚ ಗ್ರಂಥವು ಈ ಹಕ್ಕು ಸಾಧಿಸುವಿಕೆಗಳನ್ನು 420 ಸಲ ಮಾಡಿದೆ. "ಕರ್ತನು ಮೋಶೆಗೆ ಹೇಳಿದನು" ಇಲ್ಲವೇ ಮೋಶೆಯು ಕರ್ತನ ಮಾತುಗಳನ್ನು ಪುನಃ ಹೇಳಿದ್ದಾನೆ ಎಂಬುದನ್ನು ಸೂಚಿಸುತ್ತದೆ (ವಿಮೋಚನಕಾಂಡ 17:14; 19:6, 7; 20:1; 24:4, 7; 35:29). ಕೀರ್ತನೆ 119ರಲ್ಲಿ ಬರಹಗಾರನು ಪರಿಶುದ್ಧ ಬರಹಗಳನ್ನು "ಕರ್ತನ ವಾಕ್ಯ (ಇಲ್ಲವೇ ವಾಕ್ಯಗಳು)" ಎಂಬುದನ್ನು ಇಪ್ಪತ್ತನಾಲ್ಕು ಸಲ ಕರೆದಿದ್ದಾನೆ. ಅದೇ ಬರಹಗಾರನು ಪರಿಶುದ್ಧ ಬರಹಗಳಿಗಾಗಿ ಈ ಹೇಳಿಕೆಯನ್ನು ಉಪಯೋಗಿಸಲು ಭಿನ್ನವಾದ ಮಾತುಗಳನ್ನು 175 ಸಲ ಉಪಯೋಗಿಸಿದ್ದಾನೆ. ಪ್ರವಾದಿಗಳು ತಾವು ಮಾತಾಡಿದ್ದು ಇಲ್ಲವೇ ಬರೆದದ್ದು ಕರ್ತನು ತಮಗೆ ಮಾತಾಡಿದ್ದು ಆಗಿತ್ತೆಂದು ಪ್ರವಾದಿಗಳು ಹೇಳಿದರು. ಈ ಹಕ್ಕು ಸಾಧಿಸುವ ಹೇಳಿಕೆಗಳು ಯೆಶಾಯನಿಂದ 120 ಸಲ, ಯೆರೆಮೀಯನಿಂದ 430 ಸಲ, ಯೆಹೆಜ್ಕೇಲನಿಂದ 329 ಸಲ, ಆಮೋಸನಿಂದ 53 ಸಲ, ಹಗ್ಗಾಯನಿಂದ 27 ಸಲ ಮತ್ತು ಜೆಕರ್ಯನಿಂದ 53 ಸಲ ಮಾಡಲ್ಪಟ್ಟಿದೆ.

ಹಳೇ ಒಡಂಬಡಿಕೆಯು ದೇವರು ಮಾತಾಡುತ್ತಿರುವುದು ಎಂದು ಯೇಸು ಘೋಷಿಸಿದನು. "ಹೇಗೆಂದರೆ ತಂದೆತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸುವವರಿಗೆ ಮರಣದಂಡನೆಯಾಗ ಬೇಕೆಂತಲೂ ದೇವರು ಹೇಳಿದ್ದಾನೆ" (ಮತ್ತಾಯ 15:4) ಎಂದು ಆತನು ಫರಿಸಾಯರಿಗೆ ಹೇಳಿದನು. ಈ ಸಂಯುಕ್ತ ಉಲ್ಲೇಖದಲ್ಲಿ (ನೋಡಿರಿ ವಿಮೋಚನಕಾಂಡ 20:12; 21:17; ಧರ್ಮೋಪದೇಶಕಾಂಡ 5:16; ಯಾಜಕಕಾಂಡ 20:9), ಈ ಬರಹಗಳು ದೇವರ ವಾಕ್ಯವಾಗಿವೆಯೆಂದು ಯೇಸು ಪ್ರಕಟಿಸಿದನು. "ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ - ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿ

ಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು ಎಂದು ಹೇಳಿದನೆಂಬುದಾಗಿ ನೀವು ಓದಲಿಲ್ಲವೋ?" (ಮತ್ತಾಯ 19:4, 5) ಎಂದು ಹೇಳುವದರಿಂದ ಆತನು ಆದಿಕಾಂಡ 2:24ದಿಂದ ಉಲ್ಲೇಖಿಸಿದನು.

ಆದಿ ಅಪೊಸ್ತಲರು ಕೀರ್ತನೆ 2:1ನ್ನು ದಾವೀದನು ಬರೆದನೆಂಬ ನಂಬಿಕೆಯನ್ನು ವ್ಯಕ್ತಪಡಿಸಿದರು ಮತ್ತು ಪರಿಶುದ್ಧಾತ್ಮನಿಂದ ಮಾತಾಡುತ್ತಿದ್ದ ದೇವರಿಗೆ ಅನ್ವಯಿಸಿದರು. "ಕರ್ತನೇ, ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ಉಂಟುಮಾಡಿದಾತನೇ, *ನೀನು ಪರಿಶುದ್ಧಾತ್ಮ ಮೂಲಕವಾಗಿ ನಿನ್ನ ಸೇವಕನಾಗಿದ್ದ ನಮ್ಮ ಪಿತೃವಾದ ದಾವೀದನ ಬಾಯಿಂದ* ಅನ್ಯ ಜನಗಳು ಯಾಕೆ ರೇಗಿದರು, ಜನರು ವ್ಯರ್ಥವಾಗಿ ಕಲ್ಪಿಸಿಕೊಂಡದ್ದೇಕೆ?" (ಅಪೊಸ್ತಲರ ಕೃತ್ಯ 4:24, 25) ಎಂದು ಅವರು ಪ್ರಾರ್ಥಿಸಿದರು. ಅಪೊಸ್ತಲರ ಕೃತ್ಯ 13:33-35ರಲ್ಲಿ, ಪೌಲನು ಯೆಶಾಯ 55:3 ಮತ್ತು ಕೀರ್ತನೆ 16:10ರಲ್ಲಿಯ ಒಂದು ಹೇಳಿಕೆಯನ್ನು ದೇವರಿಗೆ ಅನ್ವಯಿಸದನು.

ಪೌಲನು ಹಳೇ ಒಡಂಬಡಿಕೆಗೆ "ಪರಿಶುದ್ಧ ಲೇಖನ" ಎಂಬ ಮಾತಿನೊಂದಿಗೆ ಸಂಬಂಧಿಸಿದ್ದಾನೆ ಮತ್ತು ಅದು ದೇವರ ಪ್ರೇರಣೆಯಿಂದ ಕೊಡಲ್ಪಟ್ಟಿತು ಎಂದು ಹೇಳಿದ್ದಾನೆ (2 ತಿಮೊಥೆ 3:16, 17). "ಪರಿಶುದ್ಧ ಬರೆಹದಲ್ಲಿರುವ ಯಾವ ಪ್ರವಾದನಾ ವಾಕ್ಯವೂ ಕೇವಲ ಮನುಷ್ಯ ಬುದ್ಧಿಯಿಂದ ವಿವರಿಸತಕ್ಕದ್ದಲ್ಲವೆಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಿರಿ. ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2 ಪೇತ್ರ 1:20, 21) ಎಂದು ಪೇತ್ರನು ಪ್ರಕಟಿಸಿದನು.

**ಹೊಸ ಒಡಂಬಡಿಕೆಯ ಹೇಳಿಕೊಳ್ಳುವಿಕೆಗಳು**

ಕ್ರಿಸ್ತನ ಮತ್ತು ಅಪೊಸ್ತಲರ ಬೋಧನೆಗಳು "ದೇವರ ವಾಕ್ಯ" ಎಂದು ಕರೆಯಲ್ಪಟ್ಟಿವೆ. ಇಲ್ಲವೇ ಪರಲೋಕದಿಂದ ಮಾರ್ಗದರ್ಶನ ಎಂದು ಹೇಳಲ್ಪಟ್ಟಿವೆ. ಯೇಸುವು ಪ್ರಸಂಗಿಸಿದಾಗ, "... ಜನರು ಆತನ ಸುತ್ತಲೂ ಕೂಡಿಬಂದು ದೇವರ ವಾಕ್ಯವನ್ನು ಕೇಳುತ್ತಿದ್ದರು ..." (ಲೂಕ 5:1) ಎಂದು ಬೈಬಲ್ ಹೇಳುತ್ತದೆ. ಯೇಸುವು ತಾನೇ ನಿತ್ಯವಾದ ಸತ್ಯವಾಗಿರುವನೆಂದು ಪ್ರಕಟಿಸಿದನು (ಯೋಹಾನ 14:6). "... ತಂದೆಯು ನನಗೆ ಬೋಧಿಸಿದ ಈ ಸಂಗತಿಗಳನ್ನು ನಾನು ಮಾತಾಡುತ್ತೇನೆ" (ಯೋಹಾನ 8:28) ಎಂದು ಆತನು ಹೇಳಿದನು. ತನ್ನ ಬೀಳ್ಕೊಡುವಿಕೆಯ ಪ್ರಾರ್ಥನೆಯಲ್ಲಿ, "... ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಇವರಿಗೆ ಕೊಟ್ಟಿದ್ದೇನೆ. ಇವರು ಆ ಮಾತುಗಳನ್ನು ಕೈಕೊಂಡಿದ್ದಾರೆ ... ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ ..." (ಯೋಹಾನ 17:8-14) ಎಂದು ಯೇಸು ಹೇಳಿದನು.

ಯೇಸು ತನ್ನ ಸಭೆಯನ್ನು ಕಟ್ಟುವೆನೆಂದು ಹೇಳಿದಾಗ, ಅಪೊಸ್ತಲರಿಗೆ, "ಪರಲೋಕ ರಾಜ್ಯದ ಬೀಗದ ಕೈಗಳನ್ನು ವಾಗ್ದಾನ ಮಾಡಿದನು. ಈ ಬೀಗದ ಕೈಗಳನ್ನು ಸಭೆಯನ್ನು ಆಳಿನಡಿಸುವ ನಿಯಮಗಳಿಗೆ ಕಟ್ಟುವ ಮತ್ತು ಬಿಚ್ಚುವ ಅಧಿಕಾರದಂತೆ ಆತನು ವಿವರಿಸಿದನು" (ಮತ್ತಾಯ 16:18, 19). ಈ ಪರಲೋಕದ ಸಂದೇಶವನ್ನು ಅವರಿಗೆ ತಿಳಿಯುವಂತೆ ಮಾಡುವದಕ್ಕೆ ಆತನು ಪರಿಶುದ್ಧಾತ್ಮನನ್ನು ವಾಗ್ದಾನ ಮಾಡಿದನು (ಯೋಹಾನ 14:26), "ಆತನು, ನನ್ನನ್ನು ಕುರಿತು ಸಾಕ್ಷಿ ಹೇಳುವನು ಮತ್ತು ನೀವೂ ನನ್ನ ಸಂಗಡ ಮೊದಲಿನಿಂದ ಇದ್ದುದರಿಂದ ನೀವೂ ಸಾಕ್ಷಿ ಹೇಳುವಿರಿ" (ಯೋಹಾನ 15:26, 27) ಎಂದು ಹೇಳುವದರಿಂದ ಆತನು "ಸತ್ಯದ ಆತ್ಮನನ್ನು" ಈ ವಾಗ್ದಾನಕ್ಕೆ ಕೂಡಿಸಿದನು. "ಸತ್ಯದ ಆತ್ಮನು ಬಂದಾಗ, ಆತನು ನಿಮ್ಮನ್ನು ಸಕಲ ಸತ್ಯದೊಳಗೆ

ನಡೆಸುವನು - ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದು ಕೊಂಡು ನಿಮಗೆ ತಿಳಿಸುತ್ತ ನನ್ನನ್ನೇ ಮಹಿಮೆ ಪಡಿಸುವನು'' (ಯೋಹಾನ 16:13, 14) ಎಂದು ಅನಂತರ ವಾಗ್ದಾನ ಮಾಡಿದನು. ಈ ವಾಗ್ದಾನಗಳಲ್ಲಿ ಐದು ಅಂಶಗಳಿರುವವು: ಅವರಿಗೆ ಎಲ್ಲಾ ಸಂಗತಿಗಳನ್ನು ಬೋಧಿಸುವುದು, ಯೇಸು ಹೇಳಿದ್ದೆಲ್ಲವನ್ನೂ ಅವರ ಜ್ಞಾಪಕಕ್ಕೆ ತರುವುದು, ಯೇಸುವಿನ ಬಗ್ಗೆ ಸಾಕ್ಷಿಕೊಡುವುದು, ಎಲ್ಲಾ ಸತ್ಯಗಳಲ್ಲಿ ಅವರಿಗೆ ಮಾರ್ಗದರ್ಶನ ಮಾಡುವುದು ಮತ್ತು ಬರಲಿಕ್ಕಿದ್ದುದನ್ನು ಅವರಿಗೆ ಪ್ರಕಟಿಸುವುದು. ಹೊಸ ಒಡಂಬಡಿಕೆಯ ಪ್ರತಿಯೊಂದು ಭಾಗದ ಪ್ರೇರೇಪಣೆಯನ್ನು ಇದು ಒಳಗೊಂಡಿದೆ ಎಂದು René Paché ತೋರಿಸಿದನು: ಸುವಾರ್ತೆಗಳು - "ಪರಿಶುದ್ಧಾತ್ಮನು ... ನಾನು ನಿಮಗೆ ಹೇಳಿದ್ದೆಲ್ಲವನ್ನೂ ನಿಮ್ಮ ಜ್ಞಾಪಕಕ್ಕೆ ತರುವನು"; ಅಪೊಸ್ತಲರ ಕೃತ್ಯಗಳು - "ಆತನು ನನ್ನ ವಿಷಯವಾಗಿ ಸಾಕ್ಷಿಕೊಡುವನು; ಹಾಗೂ ನೀವೂ ಸಹ ಸಾಕ್ಷಿಕೊಡುವಿರಿ"; ಪತ್ರಿಕೆಗಳು - "ಸತ್ಯದ ಆತ್ಮನು ... ಸಕಲ ಸತ್ಯದೊಳಗೆ ನಿಮ್ಮನ್ನು ನಡೆಸುವನು; ... ಆತನು ನನ್ನನ್ನು ಮಹಿಮೆ ಪಡಿಸುವನು, ..."; ಪ್ರಕಟನೆ - "ಬರಲಿಕ್ಕಿದ್ದುದನ್ನು ಆತನು ನಿಮಗೆ ಪ್ರಕಟಿಸುವನು."[1]

ಯೇಸು ಆ ವಾಗ್ದಾನ ಮಾಡಿದ ಸ್ವಲ್ಪ ದಿನಗಳಲ್ಲಿಯೇ ಲೂಕನು ಅದರ ನೆರವೇರುವಿಕೆಯ ಬಗ್ಗೆ ಬರೆದನು. ಅಪೊಸ್ತಲರನ್ನು ಕುರಿತು ಅವನು, ''ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ... ಅವರೆಲ್ಲರೂ ಪರಿಶುದ್ಧಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು'' (ಅಪೊಸ್ತಲರ ಕೃತ್ಯ 2:1-4) ಎಂದು ಪ್ರಕಟಿಸಿದನು. ಹೀಗೆ ದೇವರ ವಾಗ್ದಾನಗಳು ನೆರವೇರಿಸಲ್ಪಟ್ಟವು. ಪರಿಣಾಮಗೊಂಡ ಹೇಳಲ್ಪಟ್ಟ ಮತ್ತು ಬರೆಯಲ್ಪಟ್ಟ ಸಂದೇಶವು ದೇವರ ವಾಕ್ಯ ಎಂದು ತಿಳಿಯಲ್ಪಟ್ಟಿದೆ. ಅಪೊಸ್ತಲರ ಕೃತ್ಯ 8:14; 11:1; 12:24; 13:7, 44; 15:35ರಲ್ಲಿ ಈ ಸಂಗತಿಯನ್ನು ದೃಢಪಡಿಸುತ್ತದೆ.

ಯಾವುದೇ ಅನಿಶ್ಚಿತವಾದ ಮಾತುಗಳಲ್ಲಿ ಪೌಲನು ಪ್ರೇರೇಪಣೆಯನ್ನು ತಿಳಿಸಲಿಲ್ಲ, ಅದಕ್ಕನುಗುಣವಾಗಿ ದೇವರ ಸತ್ಯವನ್ನು ವಿಜ್ಞಾನದ ವಿಧಾನದಿಂದ ಇಲ್ಲವೇ ತತ್ವ ಜ್ಞಾನದ ಮುಖಾಂತರ ಕಲಿಯಲಿಕ್ಕಾಗದು ಎಂದು ಗಟ್ಟಿಯಾಗಿ ಹೇಳಿದನು. ಅವನು ಹೀಗೆ ಹೇಳಿದನು,

> ಆದರೆ ಬರೆದಿರುವ ಪ್ರಕಾರ, "ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ." ನಮಗಾದರೂ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು; ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆಹೊರತು ಮತ್ತಾರಿಗೆ ತಿಳಿಯುವುದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಿದುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮನುಷ್ಯಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ

ವಿವರಿಸುತ್ತೇವೆ (1 ಕೊರಿಂಥ 2:9-13).

ಮುಂದೆ ಹೋಗಿ, "ನಾನು ಕರ್ತನಿಂದ ಹೊಂದಿದ್ದನ್ನೇ ನಿಮಗೆ ಒಪ್ಪಿಸಿಕೊಟ್ಟಿದ್ದೇನೆ ..." (1 ಕೊರಿಂಥ 11:23) ಎಂದು ಪೌಲನು ಹೇಳಿದನು. ಅನಂತರದಲ್ಲಿ ಪೌಲನು ಥೆಸಲೊನೀಕ ದವರಿಗೆ, "... ಬಹಳ ವಿರೋಧದ ಮಧ್ಯದಲ್ಲಿಯೂ ದೇವರ ಸುವಾರ್ತೆಯನ್ನು ನಿಮಗೆ ಹೇಳಲು ನಮಗೆ ನಮ್ಮ ದೇವರಲ್ಲಿ ಧೈರ್ಯವಿತ್ತು" (1 ಥೆಸಲೋನಿಕ 2:2) ಎಂದು ಹೇಳಿದನು. "... ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆ ಣಿಸದೆ ನಿಜವಾಗಿಯೂ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾ ಸ್ತುತಿ ಮಾಡುತ್ತೇವೆ. ಅದು ನಂಬುವವರಾದ ನಿಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ" (1 ಥೆಸಲೊನೀಕ 2:13); "ಕರ್ತನ ಮಾತಿನ ಆಧಾರದಿಂದ ನಾವು ಇದನ್ನು ನಿಮಗೆ ಹೇಳುತ್ತೇವೆ" (1 ಥೆಸಲೊನೀಕ 4:15) ಎಂದು ಹೇಳಿದನು.

ಇಡೀ ಹೊಸ ಒಡಂಬಡಿಕೆಯು ದೇವರ ವಾಕ್ಯವಾಗಿದೆಯೆಂದು ಇಬ್ರಿಯರಿಗೆ ಬರೆದ ಪತ್ರಿಕೆಯಿಂದ ಘೋಷಿಸಲ್ಪಟ್ಟಿದೆ: "ಎಂದು ಪೂರ್ವ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಮುಖಾಂತರ ನಾನಾ ಸಮಯಗಳಲ್ಲಿ ವಿಧವಿಧವಾದ ರೀತಿಯಲ್ಲಿ ಮಾತಾಡಿದ ದೇವರು, ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ತನ್ನ ಕುಮಾರನ ಮುಖಾಂತರ ಮಾತಾಡಿದ್ದಾನೆ" (1:1, 2).

## "ದೈವ ಪ್ರೇರಣೆಯ" ಕುರಿತು ಸೂಕ್ಷ್ಮ ಪರಿಶೀಲನೆ

ಬೈಬಲಿನಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಹೇಳಿದ ದೈವ ಪ್ರೇರಣೆಯ ಭಾವನೆಗೆ ದೈವ ಪ್ರೇರಣೆಯ ಹಲವಾರು ಸಿದ್ಧಾಂತಗಳು ಹೊಂದಿಕೊಳ್ಳುವದಿಲ್ಲ. ಬೈಬಲು ದೈವಿಕ/ಮಾನವೀಯ ಪುಸ್ತಕವಾಗಿರುತ್ತದೆ. ಶಾಸ್ತ್ರಿಯು ಮೇಜಿನ ಮುಂದೆ ಕುಳಿತು ಬೈಬಲನ್ನು ಬರೆಯುವದನ್ನು ಮಾತ್ರವೇ ಕೆಲವರು ನೋಡುತ್ತಾರೆ. ಬೈಬಲನ್ನು ಮಾನವ ಪುಸ್ತಕದಂತೆ ಅವರು ನೋಡುತ್ತಾರೆ. ಇತರರು ಶಾಸ್ತ್ರಿಯು ಬರೆಯುವಂತೆ ಪದ ಪದವಾಗಿ ಆತ್ಮನು ಹೇಳುವದನ್ನು ವಿವರಿಸುತ್ತಾರೆ; ಅವರು ಬೈಬಲನ್ನು ಕೇವಲ ದೈವಿಕ ಪುಸ್ತಕದಂತೆ ನೋಡುತ್ತಾರೆ. ಶಾಸ್ತ್ರಿಯು ತನ್ನ ಮೇಜಿನ ಮುಂದೆ ಕುಳಿತು ಬರೆಯುವದನ್ನೂ ಪರಿಶುದ್ಧಾತ್ಮನು ಸತ್ಯವನ್ನು ಪ್ರಕಟಿಸುತ್ತ ಬರೆಯುವದರ ಮೇಲ್ವಿ ಚಾರಣೆ ಮಾಡುವದನ್ನೂ ನೋಡುವುದು ಯೋಗ್ಯವಾಗಿದೆ. ತನಗೆ ಗೊತ್ತಿರುವ ಪದಸಂಪತ್ತಿನಿಂದಲೂ ತನ್ನ ಸ್ವಂತ ಶೈಲಿಯಿಂದಲೂ ಪ್ರತಿಯೊಬ್ಬ ಲೇಖಕನು ಆಗಲೇ ತಾನು ತಿಳಿದು ಕೊಂಡ ಸಂಗತಿಗಳೊಂದಿಗೆ ಪ್ರಕಟವಾದ ಸತ್ಯಗಳನ್ನು ಬರೆದನು. ಆತ್ಮನ ಒಪ್ಪಿಗೆಯೊಂದಿಗಿದ್ದ ಯೋಚನೆಗಳನ್ನೂ ಪದಗಳನ್ನೂ ಮಾತ್ರವೇ ಅವನು ಬರೆದನು. ಹೀಗಿದ್ದರೂ, ಸಮಕಾಲೀನ ಸನ್ನಿವೇಷಗಳ ಸಂದರ್ಭಗಳ ಅಗತ್ಯತೆಯನ್ನು ಪೂರೈಸುವ ಸಂದೇಶವನ್ನು ಅವನು ಬರೆದನು.

ಬೈಬಲ್ ತನ್ನ ಎಲ್ಲಾ ಭಾಗಗಳಲ್ಲಿ ಪ್ರೇರೇಪಿಸಲ್ಪಟ್ಟಿದೆ ಎಂದು ಹೇಳುತ್ತದೆ. "ದೈವ ಪ್ರೇರಿತವಾದ ಪ್ರತಿಯೊಂದು ಲೇಖನವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದುದರಿಂದ ದೇವರ ಮನುಷ್ಯನು ಪ್ರವೀಣನಾಗಿ, ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" (2 ತಿಮೊಥೆ 3:16, 17) ಎಂದು ಪೌಲನು ಘೋಷಿಸಿದ್ದಾನೆ. ಪೌಲನು ಧರ್ಮೋಪದೇಶಕಾಂಡ 25:4 ಮತ್ತು ಲೂಕ 10:7ನ್ನು ಉಲ್ಲೇಖಿಸಿದ್ದಾನೆ. ಅವೆರಡನ್ನು "ಪರಿಶುದ್ಧಬರಹ" ಎಂದು ಹೇಳಿದ್ದಾನೆ (1 ತಿಮೊಥೆ 5:18). ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲೆಲ್ಲಾ ಪ್ರೇರೇಪಣೆಯು ವಿಸ್ತರಿಸಲ್ಪಟ್ಟಿದೆಯೆಂದು

ಹೀಗೆ ಪೂರ್ಣವಾಗಿ ಇಲ್ಲವೇ ಸಂಪೂರ್ಣವಾಗಿ ಪ್ರೇರೇಪಣೆಯನ್ನು ಅವನು ಒಪ್ಪಿಕೊಂಡಿದ್ದಾನೆ.

ತನ್ನ ಸತ್ಯವು ಪ್ರಕಟಿಸಲ್ಪಟ್ಟದ್ದರಲ್ಲೆಲ್ಲಾ ಪದಗಳ ಆಯ್ಕೆಯನ್ನು ದೇವರು ನಿಯಂತ್ರಿಸಿದನೆಂದು ಸಹ ಬೈಬಲ್ ಒಪ್ಪಿಕೊಳ್ಳುತ್ತದೆ. ಇದು ಬೈಬಲ್ ಬರೆಯುವದನ್ನು ಹೇಳಲ್ಪಟ್ಟಿತೆಂಬುದನ್ನು ಘೋಷಿಸುವದಕ್ಕಲ್ಲ. ಆದರೆ ಇದಕ್ಕೆ ದೈವಿಕ ಮೇಲ್ವಿಚಾರಣೆಯಿತ್ತು, "ಆಗ ಯೆಹೋವನು ಕೈಚಾಚಿ ನನ್ನ ಬಾಯನ್ನು ಮುಟ್ಟಿ, ಇಗೋ, ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟಿದ್ದೇನೆಂದು ಕರ್ತನು ಎಂದನು" (ಯೆರೆಮೀಯ 1:9) ಎಂದು ಯೆರೆಮೀಯನು ಹೇಳಿದ್ದಾನೆ. ದೈವ ಪ್ರೇರಣೆಯ ಇದೇ ಹೇಳಿಕೆಯು ಕೆಳಗಿನ ವಾಕ್ಯಗಳಲ್ಲಿಯು ಕೊಡಲ್ಪಟ್ಟಿದೆ: ವಿಮೋಚನಕಾಂಡ 4:10, 14, 15; ಧರ್ಮೋಪದೇಶಕಾಂಡ 18:18-20; 2 ಸಮುವೇಲ 23:1, 2; ಯೆಶಾಯ 1:10; ಯೆಹೆಜ್ಕೇಲ 2:7; 3:4, 10; ದಾನಿಯೇಲ 10:9-11; ಹೋಶೇಯ 1:1; ಯೋವೇಲ 1:1. ಈ ವಾಗ್ದಾನದೊಂದಿಗೆ ಯೇಸು ತನ್ನ ಶಿಷ್ಯರನ್ನು ಕಳುಹಿಸಿದನು:

> ನನ್ನ ನಿಮಿತ್ತವಾಗಿ ನಿಮ್ಮನ್ನು ಅಧಿಪತಿಗಳ ಮುಂದಕ್ಕೂ ಅರಸುಗಳ ಮುಂದಕ್ಕೂ ತೆಗೆದುಕೊಂಡು ಹೋಗುವರು. ಹೀಗೆ ಅವರಿಗೂ ಅನ್ಯಜನಗಳಿಗೂ ಸಾಕ್ಷಿಯಾಗುವದು. ಆದರೆ ಅವರು ನಿಮ್ಮನ್ನು ಒಪ್ಪಿಸಿಕೊಡುವಾಗ ಹೇಗೆ ಮಾತಾಡಬೇಕು, ಏನು ಹೇಳ ಬೇಕು ಎಂದು ಚಿಂತೆ ಮಾಡಬೇಡಿರಿ; ಆಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವುದು, ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು (ಮತ್ತಾಯ 10:18-20).

ಹೀಗೆ ಹೇಳುವದರಿಂದ ಪೌಲನು ಬೈಬಲು ಪ್ರೇರೇಪಣೆ ಹೊಂದಿದೆಯೆಂದು ಕಂಠೋಕ್ತವಾಗಿ ನೇರವಾಗಿ ಹೇಳಿದನು,

> ನಾವು ಪ್ರಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವಂಥವುಗಳನ್ನು ತಿಳಿದುಕೊಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದ್ದೇವೆ. ಇವುಗಳನ್ನು ಮನುಷ್ಯ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಆತ್ಮಿಕ ಸಂಗತಿಗಳನ್ನು ಆತ್ಮ ಸಂಬಂಧವಾದವುಗಳೊಂದಿಗೆ ಹೋಲಿಸುತ್ತಾ ಪರಿಶುದ್ಧಾತ್ಮನು ಕಲಿಸಿಕೊಟ್ಟ ಮಾತುಗಳಿಂದ ಬೋಧಿಸುತ್ತೇವೆ (1 ಕೊರಿಂಥ 2:12, 13).

ನಾಮಪದಗಳಿಂದ ಸೂಚಿಸಲ್ಪಟ್ಟ ಪದಗಳ, ಸಂಖ್ಯೆಗಳ (ಏಕ ವಚನ ಇಲ್ಲವೇ ಬಹುವಚನ) ಮತ್ತು ಕ್ರಿಯಾಪದಗಳ ಕಾಲಗಳ ಆಯ್ಕೆಯು ಪರಿಶುದ್ಧಾತ್ಮನಿಂದ ನಿಯಂತ್ರಿಸಲ್ಪಡುವುದು ಸಾಕಷ್ಟು ಮುಖ್ಯವಾಗಿದೆಯೆಂದು ಬೈಬಲು ಸೂಚಿಸುತ್ತದೆ. ಕೆಲವು ಹೊಸ ಒಡಂಬಡಿಕೆಯ ಬರಹಗಾರರು ಒಂದು ವಾಕ್ಯದ ಅರ್ಥ, ಸಂಖ್ಯೆ ಇಲ್ಲವೇ ಕಾಲದ ಮೇಲೆ ತಮ್ಮ ಇಡೀ ವಿಮರ್ಶಾತ್ಮಕ ಚರ್ಚೆಯನ್ನು ಅವಲಂಭಿಸಿದ್ದಾರೆ. ಇರುವದರ ಕ್ರಿಯಾಪದದ ಕಾಲದ ಮೇಲೆ ಪುನರುತ್ಥಾನವನ್ನು ಕುರಿತ ವಿವರಣೆಯನ್ನು ಯೇಸು ಅವಲಂಭಿಸಿದ್ದಾರೆ. "ನಾನು ಅಬ್ರಹಾಮನ ದೇವರು ಮತ್ತು ಇಸಾಕನ ದೇವರು ಹಾಗೂ ಯಾಕೋಬನ ದೇವರು" ಎಂದು ಹೇಳಿ ತಂದೆಯನ್ನು ಉಲ್ಲೇಖಿಸಿದ್ದಾನೆ. ಆ ಜನರು ಸತ್ತು ಹೋಗಿರುವದಿಲ್ಲ ಎಂಬ ಅರ್ಥವನ್ನು ಕೊಟ್ಟಿದ್ದಾನೆ (ಮತ್ತಾಯ 22:32).

ಆದಿಕಾಂಡ 12:7ರಲ್ಲಿ ದೇವರು ಕ್ರಿಸ್ತನಿಗೆ ಸಂಬಂಧಿಸಿದ್ದಾನೆಂದು ತೋರಿಸಲು, ದೇವರು "ಸಂತತಿಗಳು" ಎಂದು ಬಹುವಚನ ಉಪಯೋಗಿಸದೇ "ಸಂತತಿ" ಎಂದು ಉಪ ಯೋಗಿಸಿದ್ದನ್ನು ತೋರಿಸಿದ್ದಾನೆ (ಗಲಾತ್ಯ 3:16).

## ಪ್ರೇರೇಪಣೆಗಾಗಿ ಕೆಲವು ಪುರಾವೆಗಳು

ಬೈಬಲಿನ ದೈವ ಪ್ರೇರಣೆಯ ಘೋಷಣೆಗೆ ರುಜುವಾತುಗಳನ್ನು ಬೈಬಲು ನೀಡುತ್ತವೆ. ಬೈಬಲು ದೈವಿಕ ಮೂಲವಾಗಿದೆ ಯೆಂಬುದನ್ನು ಒಂದುಗೂಡಿಸಿದ ಪುರಾವೆಯು ಬೈಬಲಿನ ಅಸ್ತಿತ್ವಕ್ಕಾಗಿ ಸಾಕಷ್ಟಾದ ವಿವರಗಳನ್ನು ತೋರಿಸುತ್ತದೆ.

### ಬೈಬಲಿನ ಉಳಿಯುವಿಕೆ, ಭಾಷಾಂತರ, ಮತ್ತು ಪ್ರಸಾರಣೆ

ಬೈಬಲಿನ ಪ್ರೇರೇಪಣೆಗೆ ಒಂದು ಸಹಾಯಕರವಾದ ರುಜುವಾತು ಅದರ ಉಳಿಯುವಿಕೆಯ, ಭಾಷಾಂತರ ಮತ್ತು ಪ್ರಸಾರಣೆಯ ಗಣನೀಯವಾದ ವಿಷಯವಾಗಿದೆ. ನಾಶಕರವಾದ ಸಮಯದಿಂದ ಬೈಬಲು ಉಳಿದುಕೊಂಡಿದೆ. ಮೋಶೆಯ ಕಾಲದಿಂದ ಇಂದಿನವರೆಗೆ (ಸುಮಾರು 3,500 ವರ್ಷಗಳ ವರೆಗೆ) ಒಂದು ಪುರಾತನ ಪುಸ್ತಕವು ಕ್ಷಯಸುವಿಕೆ ಮತ್ತು ಅಲಕ್ಷ್ಯಮಾಡುವದರಿಂದ ನಾಶವಾಗದೇ ಉಳಿದು ಕೊಂಡಿರುವುದು ನಿಜವಾಗಿಯೂ ಗಣನೀಯವಾದದ್ದಾಗಿದೆ. ಪುರಾತನ ಕಾಲದಲ್ಲಿ ಬರೆಯಲ್ಪಟ್ಟ ಪುಸ್ತಕಗಳ ಉತ್ಪಾದನೆ ಹಾಗೂ ಪ್ರಸಾರಣೆಯು, ಅವುಗಳು ಸಂಪೂರ್ಣವಾಗಿ ಕೈಯಿಂದ ಬರೆಯಲ್ಪಟ್ಟವುಗಳಾಗಿದ್ದುದರಿಂದ ಬಹಳವಾಗಿ ಮಿತಿಯುಳ್ಳವುಗಳಾಗಿದ್ದವು. ಆದುದರಿಂದ ಸಂಖ್ಯೆಯಲ್ಲಿ ನಿರ್ಬಂಧಿಸಲ್ಪಟ್ಟಿದ್ದವು. ಈ ಪುರಾತನ ಕಾಲದ ಪುಸ್ತಕಗಳು ಬೆಂಕಿಯನ್ನು, ಬಿರುಗಾಳಿಯನ್ನು, ಕ್ರಿಮಿಗಳನ್ನು, ನಶಿಸಿ ಹೋಗುವದನ್ನು, ನಿರ್ಲಕ್ಷಿಸುವಿಕೆಯನ್ನು ಮತ್ತು ವೈರಿಗಳನ್ನು ಸಹ ಎದುರಿಸಿದವು. ಬೈಬಲಿನ ಉಳಿದು ಕೊಳ್ಳುವಿಕೆಯು ಅನೇಕ ಕೈಬರಹದ ಪ್ರತಿಗಳ, ಆವೃತ್ತಿಗಳ ಮತ್ತು ಉಲ್ಲೇಖಗಳ ಬಲವಾದ ಪುರಸ್ಕಾರದೊಂದಿಗೆ ಅತ್ಯಾಶ್ಚರ್ಯಕರವಾದದ್ದಾಗಿದೆ.

ಬೈಬಲು ಮಹಾ ಹಿಂಸೆಯಲ್ಲಿಯೂ ವಿಮರ್ಶೆಗಳಲ್ಲಿಯೂ ಉಳಿದುಕೊಂಡಿದೆ. ರೋಮ್ ಚಕ್ರವರ್ತಿಗಳ ದಿನಗಳಿಂದ ಲೋಕದಲ್ಲಿಯ ಇತ್ತೀಚೆಗಿನ ಕಮ್ಯೂನಿಷ್ಟು ದಬ್ಬಾಳಿಕೆಯ ದಿನಗಳ ವರೆಗೆ ಬೈಬಲು ಬಹಳ ಸಲ ನಿರ್ನಾಮವಾಗುವದನ್ನು ಎದುರಿಸಿದೆ. ಅದು ಹಿಂಸಿಸಲ್ಪಟ್ಟಿದೆ, ನಿಷೇಧಿಸಲ್ಪಟ್ಟಿದೆ, ಹಾಗೂ ಸುಡಲ್ಪಟ್ಟಿದೆ. ಅದು ಪುಸ್ತಕಗಳಲ್ಲಿ ಹತಸಾಕ್ಷಿಯಾದದ್ದಾಗಿದೆ, ಆದರೆ ಜಯಶಾಲಿಯಾಗಿ ಉಳಿದು ಕೊಂಡು ತನ್ನ ಪ್ರಭಾವದಲ್ಲಿಯೂ ವಿತರಣೆಯಲ್ಲಿಯೂ ಬೆಳೆದು ಬಂದಿದೆ. ಪುರಾತನ ತತ್ವಜ್ಞಾನಿಗಳಾದ ಸೆಲ್ಸಸ್ ಮತ್ತು ಪೋರ್ಫಿರಿ ಅವರಿಂದ ನಾಶಕರವಾದ ಖಂಡನೆಯ ಸಮಯದ ನಂತರ ಬೈಬಲು ಒಂದು ಸಾವಿರ ವರ್ಷಗಳ ಸಮಾಧಾನದ ಅಸ್ತಿತ್ವವನ್ನು ಅನುಭವಿಸಿತು. ಬೇರೆ ಯಾವುದೇ ಪುಸ್ತಕಕ್ಕಿಂತ ಹೆಚ್ಚಾಗಿ ಜನರಿಂದ ಅದು ಗೌರವಿಸಲ್ಪಡುವದಾಯಿತು. ಒಂದು ಸಾವಿರ ವರ್ಷಗಳ ತರುವಾಯ ಥೊಮಸ್ ಹೊಬ್ಬ್ಸ್ (1588-1679) ಹಾಗೂ ಬಾರುಕ ಸ್ಪನೋಝಾ (1632-77) ಅವರು ಬೈಬಲಿನ ಮೇಲೆ ದೋಷಾರೋಪಣೆಯ ದಾಳಿಯನ್ನು ಪ್ರಾರಂಭಿಸಿದರು. ಆಗ ಜೀನ ಆಸ್ಟ್ರುಕ್‌ರಿಂದ (1684-1766) ಟೀಕೆಯು ಪ್ರತಿಯೊಂದು ಅಲ್ಪ ವಿವರಣೆಗಳ ಕಡೆಗೆ ಗಮನ ಸೆಳೆದ ತೀರ್ವವಾದ ದಾಳಿಗಳ ಸರಣಿಯನ್ನು ಪ್ರಾರಂಭಿಸಿತು. "ಬೇರೆ ಯಾವುದೇ ಪುಸ್ತಕವು ಅಷ್ಟು ಕತ್ತರಿಸಲ್ಪಟ್ಟಿಲ್ಲ, ಚೂರುಚೂರು ಮಾಡಲ್ಪಟ್ಟಿಲ್ಲ, ಒನೆಯಲ್ಪಟ್ಟಿಲ್ಲ, ಪರಿಶೀಲಿಸಲ್ಪಟ್ಟಿಲ್ಲ

ಹಾಗೂ ದೂಷಿಸಲ್ಪಟ್ಟಿಲ್ಲ"[2] ಎಂದು ಬೆರ್ನಾಡ ರಾಮ್ಮ ಹೇಳಿದ್ದಾರೆ. ಹಿಂಸೆಯ ನಿಮಿತ್ತ ಅನೇಕರಿಗೆ ಬೈಬಲ್ ದೊರೆಯದೇ ಇದ್ದರೂ ವಿರುದ್ಧವಾದ ಟೀಕೆಯ ಪರಿಣಾಮವಾಗಿ ಎಷ್ಟೋ ಜನರು ತಮ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಿರ ಬಹುದಾಗಿದ್ದರೂ ಬೈಬಲು ಎಂದಾದರೂ ಬರೆಯಲ್ಪಟ್ಟ ಪುಸ್ತಕಗಳಿಗಿಂತ ಬಹು ಹೆಚ್ಚಾಗಿ ಪ್ರಕಟಗೊಳ್ಳುತ್ತಿರುವ ಪುಸ್ತಕವಾಗಿದೆ.

ಬೈಬಲು ಯಾವುದೇ ಪುಸ್ತಕಕ್ಕಿಂತ ಹೆಚ್ಚಾಗಿ ಅನುವಾದಕೊಂಡ ಪುಸ್ತಕವಾಗಿದೆ. ಬೈಬಲು ಮೊದಲು ಅನುವಾದಗೊಂಡ ಗ್ರಂಥವಾಗಿದೆ (ಹಿಬ್ರೂ ಹಳೇ ಒಡಂಬಡಿಕೆಯ ಅನುವಾದವು ಸೆಪ್ಟುಜಿಂಟ್, ಈ ಗ್ರೀಕ್ ಭಾಷಾಂತರವು ಸುಮಾರು ಕ್ರಿ.ಪೂ. 250ರಲ್ಲಿ ಮಾಡಲ್ಪಟ್ಟಿದೆ). ಇದು ಬೇರೆ ಬೇರೆ ಭಾಷೆಗಳಲ್ಲಿ ಅನುವಾದಗೊಂಡಿದೆ ಹಾಗೂ ಅಸ್ತಿತ್ವದಲ್ಲಿರುವ ಬೇರೆ ಯಾವುದೇ ಪುಸ್ತಕಕ್ಕಿಂತ-ಹೆಚ್ಚಾಗಿ ವಿವರಿಸಲ್ಪಟ್ಟಿದೆ. ಈ ಸಂಗತಿಗಳು ಬೈಬಲು ದೇವರಿಂದ ಪ್ರೇರೇಪಿಸಲ್ಪಟ್ಟಿದೆ ಎಂಬುದಕ್ಕೆ ಸಹಾಯಕವಾದವುಗಳಾಗಿವೆ.

**ಬೈಬಲಿನ ಕಥೆಯ ಐಕ್ಯತೆ ಮತ್ತು ಮುಂದುವರಿಯುವಿಕೆ**

ಒಂದು ಔಷಧ ಬಾಟಲಿಯು ತಾನು ಏನೆಂದು ಹೇಳಿಕೊಳ್ಳತ್ತದೆಯೋ, ಅದಾಗಿರುತ್ತದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಒಂದೇ ಮಾರ್ಗವು ಅದರಲ್ಲಿರುವದನ್ನು ಪರೀಕ್ಷಿಸುವುದು. ಒಬ್ಬ ವಿದ್ಯಾರ್ಥಿಯು ಬೈಬಲಿನಲ್ಲಿಯ ವಿಷಯಗಳನ್ನು ಪರೀಕ್ಷಿಸಿದಾಗ ಮಾತ್ರವೇ ಅದು ನಿಜವಾಗಿ ದೇವರ ವಾಕ್ಯವಾ ಗಿದೆಯೋ ಇಲ್ಲವೋ ಎಂಬುದನ್ನು ತಿಳಿದು ಕೊಳ್ಳುತ್ತಾನೆ.

*ಬೈಬಲು, ಒಂದು ದೊಡ್ಡ ಅದ್ಭುತವಾಗಿದೆ.* ಬೈಬಲಿನ ಬರಹಗಳ ಐಕ್ಯತೆ ಮತ್ತು ಮುಂದುವರಿಕೆಯು ಒಂದು ಅಲೌಕಿಕ ಮನಸ್ಸಿನ ಮಾರ್ಗದರ್ಶನದಲ್ಲಿ ಉತ್ಪಾದಿಸಲ್ಪಟ್ಟಿರುವುದು ಎಂಬುದನ್ನು ಸೂಚಿಸುತ್ತದೆ. ಅನೇಕ ಪ್ರದೇಶಗಳಲ್ಲಿ ಜೀವಿಸುತ್ತಿದ್ದ ನಾಲ್ವತ್ತು ಜನರು, ವಿವಿಧ ಕೆಲಸಗಳಲ್ಲಿ ತೊಡಗಿದ್ದವರು, ಭಿನ್ನವಾದ ಶಿಕ್ಷಣೆಯ ಹಿನ್ನೆಲೆಗಳುಳ್ಳವರು ಹಾಗೂ ಹದಿನೈದು ಶತಮಾನಗಳ ವಿಸ್ತಾರವಾದ ಭಿನ್ನ ಸಮಯ ಗಳಲ್ಲಿ ಜೀವಿಸುತ್ತಿದ್ದವರು, ಪ್ರತಿಯೊಬ್ಬರೂ ಕಥೆಯ ಕೆಲವು ಸಾಲುಗಳನ್ನು ಬರೆದರು. ಪ್ರತಿಯೊಂದು ಸಾಲು ಸಂಪೂರ್ಣ ಕಥೆಯನ್ನು ಹೇಳಲು ಮುಂದುವರಿಸುವಂತೆ ಸುಂದರವಾದ ಮತ್ತು ಶ್ರೇಷ್ಠವಾದ ಕಥೆಯನ್ನು ರಚಿಸಲು ಈ ಸಾಲುಗಳು ಒಂದಾಗಿ ತರಲ್ಪಡುವದನ್ನು ಕಲ್ಪಿಸಿಕೊಳ್ಳಿರಿ. ಅಂಥ ಸಂಗತಿಯು ಸಾಧಿಸಲ್ಪಟ್ಟರೆ ಲೇಖಕರು ಒಂದು ಮನಸ್ಸಿನಿಂದ ನಿರ್ದೇಶಿಸಲ್ಪಟ್ಟಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

*ಅದನ್ನು ಬರೆಯುವದರಲ್ಲಿ ಒಳಗೊಂಡಿರುವ ಜನರು ಹಾಗೂ ಸಮಯ.* ಹೆಚ್ಚಾಗಿ ಪ್ರತಿಯೊಂದು ಜೀವನ ಮಾರ್ಗದಿಂದ ಸುಮಾರು ನಲ್ವತ್ತು ಜನ ಲೇಖಕರು - ಮೋಶೆ, ಒಬ್ಬ ರಾಜಕೀಯ ನಾಯಕ, ಐಗುಪ್ತದಲ್ಲಿ ಶಿಕ್ಷಣೆ ಹೊಂದಿದವನು; ಯೆಹೋಶುವ, ಸೇನಾಪತಿ; ಸೊಲೊಮೋನ, ಒಬ್ಬ ಅರಸ; ಆಮೊಸ, ಕುರಿಕಾಯುವವನು; ದಾನಿಯೇಲ, ಪ್ರಧಾನ ಮಂತ್ರಿ; ನೆಹೆಮೀಯ, ಒಬ್ಬ ಪಾನದಾಯಕ; ಲೂಕ ಒಬ್ಬ ವೈದ್ಯ; ಮತ್ತಾಯ, ಒಬ್ಬ ಸುಂಕವಸೂಲಿಮಾಡುವವ; ಪೇತ್ರ, ಒಬ್ಬ ಬೆಸ್ತ; ಪೌಲ, ಒಬ್ಬ ರಬ್ಬಿ; ಹಾಗೂ ಇತರರು - ಅರವತ್ತಾರು ಪುಸ್ತಕಗಳನ್ನು ಇಲ್ಲವೇ ಪತ್ರಗಳನ್ನು ಅರವತ್ತು ತಲೆಮಾರುಗಳಿಗೆ ವಿಸ್ತರಿಸಿದ ಸುಮಾರು ಹದಿನೈದು ನೂರು ವರ್ಷಗಳಲ್ಲಿ ಬರೆದರು. ಭಿನ್ನ ವಾದ ಸ್ಥಳಗಳಿಂದ ಬರೆದರು - ಮೋಶೆಯು ಅರಣ್ಯದಲ್ಲಿ; ಯೆರೆಮೀಯನು ಸೆರೆಮನೆಯಲ್ಲಿ; ದಾನಿಯೇಲನು ಬೆಟ್ಟದ ಪಕ್ಕದಲ್ಲಿ ಮತ್ತು ಅರಮನೆಯಲ್ಲಿ; ಪೌಲನು ಸೆರೆಮನೆಯ ಗೋಡೆಗಳ ಮಧ್ಯದಲ್ಲಿ; ಲೂಕನು ಭೂಮಿಯ ಮೇಲೆ ಮತ್ತು ಸಮುದ್ರದ ಮೇಲೆ ಪ್ರಯಾಣ

ಮಾಡುತ್ತಿದ್ದಾಗ; ಯೋಹಾನನು ಪತ್ಮಾಸಿನ ದ್ವೀಪದಲ್ಲಿ ಸೆರೆಮನೆಯಲ್ಲಿದ್ದಾಗ ಬರೆದರು. ಮಹಾ ಸಂತೋಷದ ಸಮಯದಲ್ಲಿ ಹಾಗೂ ನಿರಾಶೆಯ ಆಳಗಳಲ್ಲಿದ್ದ ಸಮಯಗಳಲ್ಲಿ ಅವರು ಬರೆದರು. ಹೀಬ್ರೂ, ಗ್ರೀಕ್ ಮತ್ತು ಅರಾಮಿಕ್ ಭಾಷೆಗಳಲ್ಲಿ ಬರೆದರು. ನೂರಾರು ವಿವಾದಾತ್ಮಕ ವಿಷಯಗಳನ್ನೊಳಗೊಂಡದ್ದನ್ನು ಅವರು ಬರೆದರು. ಈ ಗ್ರಂಥಕರ್ತ ಒಬ್ಬ ಮನುಷ್ಯನ ನಿರಂತರವಾಗಿ ಪ್ರಕಟಿಸುವ ಕಥೆಯನ್ನು ಅವನ ಮೂಲ, ಪತನ, ವಿಮೋಚನೆ ಹಾಗೂ ನಿತ್ಯವಾದ ಅಂತಿಮ ಸ್ಥಿತಿಯನ್ನು ಆದಿಕಾಂಡದಿಂದ ಪ್ರಕಟನೆಯವರೆಗೆ ಸಾಮರಸ್ಯ ದೊಂದಿಗೆ ಮತ್ತು ಮುಂದುವರಿಯುವಿಕೆಯೊಂದಿಗೆ ಬರೆದರು.

*ಒಂದು ಕೇಂದ್ರ ಸತ್ಯ ಇಲ್ಲವೇ ಕಥೆಯು ಬೆಳೆಯಿಸಲ್ಪಟ್ಟಿತ್ತು.* ಬೈಬಲಿನ ಒಂದು ಕೇಂದ್ರ ಸತ್ಯವು ಬೆಳೆಯಿಸಲ್ಪಟ್ಟು ಕಾಪಾಡಲ್ಪಟ್ಟಿದ್ದ ರೀತಿಯು ಅದು ದೇವರ ವಾಕ್ಯ ವಾಗಿದೆ ಯೆಂಬುದಕ್ಕೆ ಪುರಾವೆಯನ್ನು ಒದಗಿಸುತ್ತದೆ. ತತ್ವಜ್ಞಾನದ ಮತ್ತು ಧರ್ಮದ ಪದ್ಧತಿಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಜೀವಮಾನದ ಅವಧಿಯೊಳಗಿನ ಒಂದೇ ಮನಸ್ಸಿನ ಕಾರ್ಯವಾಗಿರುವವು. ಅದು ಹಾಗಿರುವಾಗ ಐಕ್ಯತೆಯು ಹೇಗೆ ಕಾಪಡಲ್ಪಡುತ್ತದೆ ಮತ್ತು ವಿಚಾರಗಳು ಹೇಗೆ ಒಂದಕ್ಕೊಂದು ಸಂಬಂಧಿಸಿ ಸಾಮರಸ್ಯವುಳ್ಳವುಗಳಾಗಿರುತ್ತವೆ ಎಂಬುದನ್ನು ಸುಲಭವಾಗಿ ಅರ್ಥಮಾಡಿ ಕೊಳ್ಳಬಹುದು. ಬೈಬಲು ಆ ರೀತಿಯಲ್ಲಿ ಬೆಳ ವಣಿಗೆ ಹೊಂದಲಿಲ್ಲ. ಅದು ಒಂದು ಮಾನವ ಮನಸ್ಸಿನ ಉತ್ಪಾದನೆಯಲ್ಲ, ಇಲ್ಲವೇ ಒಬ್ಬ ಮನುಷ್ಯನ ಜೀವನ ಸಮಯದಲ್ಲಿ ಬೆಳವಣಿಗೆ ಹೊಂದಲಿಲ್ಲ. ಬೈಬಲು ನೂರಾರು ವರ್ಷಗಳ ವರೆಗೆ ಅನೇಕ ಜನರ ಪ್ರಯತ್ನಗಳ ಪರಿಣಾಮವಾ ಗಿರುವುದು. ಅದರ ಕಥೆಯ ಪ್ರಗತಿಯು ಒಂದು ಹಂತದಿಂದ ಇನ್ನೊಂದೂ ಹಂತಕ್ಕೆ ಮುಂದುವರಿಯುವುದು - ಆದಾಮ, ಹವ್ವರ ಪತನದಿಂದ ಸಭೆಯ ಬೆಳವಣಿಗೆಯವರೆಗೆ, ಏದೆನ್ ತೋಟದಲ್ಲಿ ಕಳೆದು ಕೊಂಡ ಜೀವವೃಕ್ಷವನ್ನು ಕಂಡು ಕೊಳ್ಳುವ ವರೆಗೆ ಮುಂದು ವರಿಯುತ್ತದೆ (ಪ್ರಕಟನೆ 22:1, 2, 14). ಇದು ದಾಸತ್ವದ, ಐಕ್ಯ ಸಾಮ್ರಾಜ್ಯದ, ವಿಭಾಗವಾದ ರಾಜ್ಯದ ಮತ್ತು ಸೆರೆಮನೆಯ ಕಾಲಗಳ ಮುಖಾಂತರ ಹಂತ ಹಂತವಾಗಿ ಬೆಳೆಯುತ್ತದೆ. ಈ ಪ್ರಗತಿಯು ಯೇಸುವಿನ ಜನನ, ಆತನ ಜೀವನ, ಆತನ ಮರಣ, ಆತನ ಪುನರುತ್ಥಾನ, ಪರಿಶುದ್ಧಾ ತ್ಮನ ಕಳುಹಿಸಿಕೊಡುವಿಕೆ, ಸಭೆಯ ಸ್ಥಾಪನೆ ಮತ್ತು ಸಭೆಯ ಸ್ಥಿರಪಡಿಸುವಿಕೆಯ ಮುಖಾಂತರ ಮುಂದುವರಿಯುತ್ತದೆ. ಆದಿಕಾಂಡದಲ್ಲಿ ಕಳೆದುಕೊಂಡ ಪರದೈಸವು ಪರಲೋಕದಲ್ಲಿ ಪುನಃ ಪಡೆದುಕೊಳ್ಳುವಂಥದ್ದಾಗಿದೆ. ಬೈಬಲು ಯಾರ ಸಹಕಾರವಿಲ್ಲದೆ ಪ್ರತ್ಯೇಕವಾದ ಬರಹಗಳ ಸಂಗ್ರಹವಾಗಿರುವದಿಲ್ಲ, ಆದರೆ ಒಂದೇ ಕಥೆ ಹೇಳುವ ಒಂದರ ಮೇಲೆ ಒಂದು ಅವಲಂಭಿಸಿದ್ದ ಬರಹಗಳ ಒಂದು ಪುಸ್ತಕವಾಗಿದೆ. ಅತ್ಯಾಶ್ಚರ್ಯಕರ ವಾದ ಐಕ್ಯತೆಯ ಸಂಪೂರ್ಣವನ್ನು ಒಂದಾಗಿ ಚಿತ್ರಿಸುತ್ತದೆ.

*ಹಳೇ ಒಡಂಬಡಿಕೆಯು ಹೊಸ ಒಡಂಬಡಿಕೆಯಿಂದ ಮುಂದುವರಿಸಲ್ಪಟ್ಟಿದೆ.* ಮೆಸ್ಸೀಯನ ವಾಗ್ದಾನದೊಂದಿಗೆ ಮತ್ತು ಆತನ ಬರೋಣದೊಂದಿಗೆ ಹೊಸದು ಪ್ರಾರಂಭವಾಗುವದರೊಂದಿಗೆ ಹಳೇ ಒಡಂಬಡಿಕೆಯು ಮುಕ್ತಾಯಗೊಳ್ಳುವದನ್ನು ಒಬ್ಬನು ಗಮನಿಸುವಾಗ ಹಳೇ ಒಡಂಬಡಿಕೆಯ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿಯ ಸಂಬಂಧವು ಸ್ಪಷ್ಟವಾಗುತ್ತದೆ. "ಇಗೋ. ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ಮಾರ್ಗವನ್ನು ಸಿದ್ಧ ಮಾಡುವನು; ನೀವು ಹುಡುಕುವ ಕರ್ತನು ತನ್ನ ಆಲಯಕ್ಕೆ ಫಕ್ಕನೇ ಬರುವನು; ಆಹಾ, ನೀವು ಸಂತೋಷ ಪಡುವ ಒಡಂಬಡಿಕೆಯ ದೂತನು ಬರುತ್ತಿದ್ದಾನೆ; ಇದು ಸೈನ್ಯಗಳ ಅಧಿಪತಿಯಾದ ಯೆಹೋವನ ನುಡಿ" (ಮಲಾಕಿ 3:1) ಎಂದು ಹೇಳುವದರಿಂದ ಮಲಾಕಿಯು ಕ್ರಿಸ್ತನಿಗಾಗಿ ಮತ್ತು ಆತನ ಮುಂದೂತನಿಗಾಗಿ ನಿರೀಕ್ಷೆಯಿಂದ ಮುನ್ನೋಡುವದಕ್ಕಾಗಿ ತನ್ನ ವಾಚಕರನ್ನು

ನಡಿಸುತ್ತಾನೆ. "ನಾನು ಬಂದು ದೇಶವನ್ನು ಶಾಪದಿಂದ ಹತಮಾಡದಂತೆ ಯೆಹೋವನ ಆಗಮನದ ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸು ವೆನು; ಅವನು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು" (ಮಲಾಕಿ 4:5, 6) ಎಂದು ಹೇಳುವದರಿಂದ ಸೈನ್ಯಗಳ ಯೆಹೋವನೂ ಸಹ ಉಲ್ಲೇಖಿಸಿದ್ದಾನೆ. ಮುಂದೂತನ ಬಗ್ಗೆ ಮತ್ತು ಮೆಸ್ಸೀಯನ ಬಗ್ಗೆ ಹೇಳಿದ್ದನ್ನು ಮಲಾಕಿಯನು ಬಿಟ್ಟದ್ದರಿಂದ ನಾಲ್ಕು ಸುವಾರ್ತೆಗಳು ಮುಂದುವರಿಸುತ್ತವೆ. "ದೇವ ಕುಮಾರನಾದ ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆಯ ಪ್ರಾರಂಭವು. ಇಗೋ, ನಾನು ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ಸರಿಮಾಡುವನೆಂತಲೂ ..." (ಮಾರ್ಕ 1:1, 2) ಎಂದು ಸ್ನಾನಿಕನಾದ ಯೋಹಾನನ ಬರೋಣವನ್ನು ಮಾರ್ಕನು ಹೇಳಿದ್ದಾನೆ. ಕರ್ತನಿಗಾಗಿ ಜನರನ್ನು ಸಿದ್ಧಪಡಿಸುವದಕ್ಕಾಗಿ ಯೋಹಾನನು ಬರುವನು ಎಂದು ಲೂಕನು ಹೇಳಿದ್ದಾನೆ (ಲೂಕ 1:17).

*ಹೊಸ ಒಡಂಬಡಿಕೆಯಲ್ಲಿ ಹಳೇ ಒಡಂಬಡಿಕೆಯ ನೆರವೇರುವಿಕೆ.* "ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು" (ಮತ್ತಾಯ 1:22; ನೋಡಿರಿ 2:5, 15, 17, 23; 3:3; 4:14) ಎಂಬ ರೀತಿಯ ಹೇಳಿಕೆಗಳು ಪುನಃ ಪುನಃ ಹೇಳಲ್ಪಟ್ಟಿರುವದರಿಂದ ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳ ಸಂಬಂಧವು ಸ್ಪಷ್ಟಪಡಿಸಲ್ಪಟ್ಟಿದೆ. ಬೈಬಲಿನ ಮೊದಲಿನ ಭಾಗಗಳು ಕ್ರಿಸ್ತನ ಮತ್ತು ಆತನ ರಾಜ್ಯದ ನಿರೀಕ್ಷೆಯಲ್ಲಿ ಬರೆಯಲ್ಪಟ್ಟವು. ಅನಂತರದ ಭಾಗಗಳು ಈ ಎಲ್ಲಾ ಸಂಗತಿಗಳು ವಾಸ್ತವಿಕತೆಗೆ ತರಲ್ಪಟ್ಟವೆಂದು ನಂಬಿಕೆಯೊಂದಿಗೆ ಬರೆಯಲ್ಪಟ್ಟವು. ಪೇತ್ರನು ಹೀಗೆ ಘೋಷಿಸಿದ್ದಾನೆ,

> ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆಯ ವಿಷಯದಲ್ಲಿ ಸೂಕ್ಷ್ಮವಾಗಿ ವಿಚಾರಿಸಿ ಪರಿಶೋಧನೆ ಮಾಡಿದರು. ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೇ ಎಂಥ ಕಾಲವನ್ನು ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು. ಈ ಸಂಗತಿಗಳನ್ನು ಮುಂತಿಳಿಸುವದರಲ್ಲಿ ತಮಗೋಸ್ಕರವಲ್ಲ, ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದರೆಂಬುದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪರಿಶುದ್ಧಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು (1 ಪೇತ್ರ 1:10-12).

ಐಕ್ಯತೆ, ಪ್ರಗತಿ ಮತ್ತು ಮುಂದುವರಿಯುವಿಕೆಯು ಬೈಬಲನ್ನು ಒಂದು ಅಲೌಕಿಕ ಹಾಗೂ ನಿಯಂತ್ರಿಸುವ ಮನಸ್ಸಿನ ಉತ್ಪಾದನೆಯೆಂದು ಒಪ್ಪಿಕೊಳ್ಳುವಷ್ಟು ದೊಡ್ಡವುಗಳಾಗಿವೆ. ಈ ಗುಣಲಕ್ಷಣಗಳಿಗೆ ಹಳೇ ಮತ್ತು ಹೊಸ ಒಡಂಬಡಿಕೆಗಳು ಒಟ್ಟಾಗಿ ನಿಲ್ಲುವ ಇಲ್ಲವೇ ಬಿದ್ದುಹೋಗುವ ಅವಶ್ಯಕತೆಯಿದೆ.

ಒಂದೇ ಒಂದು ವಿವಾದಾತ್ಮಕ ವಿಷಯವನ್ನು ಕುರಿತ ಜಾಗತಿಕ ಮಹಾಸಾಹಿತಿಕ, ಐತಿಹಾಸಿಕ ಮತ್ತು ತತ್ವಜ್ಞಾನ ಶಾಸ್ತ್ರದ ಬರಹಗಳಲ್ಲಿ ಕೇವಲ ಹತ್ತನ್ನು ಒಬ್ಬನು

ತೆಗೆದುಕೊಂಡರೆ ಅವನು ಸಾಮರಸ್ಯವನ್ನು ಕಂಡುಕೊಳ್ಳುವದಿಲ್ಲ. ತಾನು ಬಯಸಿದ ಯಾವುದೇ ಹತ್ತನ್ನು ಆಯ್ಕೆಮಾಡಿಕೊಂಡರೂ ಒಂದರಿಂದ ಒಂದಕ್ಕೆ ಮುಂದುವರಿಕೆಯನ್ನು ನಿಶ್ಚಿತವಾಗಿಯೂ ಅವನು ಕಂಡು ಕೊಳ್ಳುವದಿಲ್ಲ.

## ಮುಕ್ತಾಯ

ಬೈಬಲು ದೇವರಿಂದ ಪ್ರೇರೇಪಿಸಲ್ಪಟ್ಟಿದೆ ಮತ್ತು ಸಂಶೋಧನೆ ಮಾಡುವದರಿಂದ ನಂಬಲರ್ಹ ಪುರಾವೆಯನ್ನು ಕೊಡುತ್ತದೆ. ಕ್ರಿಸ್ತನ ಹಾಗೂ ರಕ್ಷಣೆಯ ತನ್ನ ಸಂದೇಶವನ್ನು ತಲತಲಾಂತರದವರಿಗೆ ಹೇಳಲು ಅದು ಉಳಿದು ಕೊಂಡಿದೆ.[3]

ಟಿಪ್ಪಣಿಗಳು

[1]René Paché, *The Inspiration and Authority of Scripture*, trans. Helen I. Needham (Chicago: Moody Press, 1969), 90. [2]Bernard Ramm, *Protestant Christian Evidences* (Chicago: Moody Press, 1957), 233. [3]"The New Testament as Scripture," by Bill Lambert, from *New Testament Survey*. Used by permission of Harding University, Searcy, Arkansas.

© 2009 Truth for Today